ಶ್ರೀ ಜೆ. ಆರ್ ಹಾಲಸ್ವಾಮಿ.—ಮ್ಯಾನೇಜ್‌ಮೆಂಟಿನವರು ಆಡಿಟ್ ವರದಿ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ವರದಿ ಕೊಟ್ಟರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ರೂಲ್ಸ್ ಪ್ರಕಾರ ಯಾವ ಮೇನ್‌ಟೆನೆನ್ಸ್ ಗ್ರಾಂಟ್ ಕೂಡ ಬೇಕೋ ಅದನ್ನು ಖಂಡಿತ ಕೊಡಲಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆಡಿಟೆಡ್ ಅಕೌಂಟ್ಸ್ ಬರಲಿಲ್ಲ ಎಂದು ಹೇಳುತ್ತೀರಿ. ತಮ್ಮ ಇಲಾಖೆಯ ಆಡಿಟರ್ ಅವರೇ ಆಡಿಟ್ ಮಾಡಿ ಅವನ್ನೇ ಮ್ಯಾನೇಜ್‌ಮೆಂಟಿನವರ ಲೆಕ್ಕ ಅಂತ ತಿಳಿದುಕೊಂಡು ಈ ಗ್ರಾಂಟುಗಳನ್ನು ಕೊಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ತಾಲ್ಲೂಕು ಬೋರ್ಡ್ ಹೈಸ್ಕೂಲುಗಳಿಗೆ ಕಂಟ್ರೋಲರ್ ಆಫ್ ಲೋಕಲ್ ಆಡಿಟ್ ಸರ್ಕಾರ್ ಅವರು ಆಡಿಟ್ ಮಾಡಬೇಕು, ಅವರು ಮಾಡಿಲ್ಲ, ಅನೇಕ ಹೈಸ್ಕೂಲುಗಳ ಲೆಕ್ಕ ಪತ್ರ ಆಡಿಟ್ ಆಗಿಲ್ಲ. ಇದನ್ನು ಸ್ಟೇಟ್ ಅಕೌಂಟ್ಸ್ ಕಂಟ್ರೋಲರ್ ಅವರಿಗೆ ಬರೆದಿದ್ದೇವೆ ಮತ್ತು ಅಂತಹ ಸಂದರ್ಭದಲ್ಲಿ ಏನಾಯಿತಿ ಕೊಡಬೇಕೆನ್ನುವ ವಿಷಯವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿಗೂ ಕೂಡ ಬರೆದಿದ್ದೇವೆ. ಅಲ್ಲಿಂದ ಉತ್ತರ ಬಂದಮೇಲೆ ಬೇರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಸಾಕಾದಷ್ಟು ಸಿಬ್ಬಂದಿ ಇಲ್ಲದೆ ಆಡಿಟ್ ಮಾಡುವುದು ಎಂತು ಹೋಗಿ ಈ ಮೇನ್‌ಟೆನೆನ್ಸ್ ಗ್ರಾಂಟ್ ಕೊಡದೇ ಇರುವುದಕ್ಕೆ ಅದೂ ಒಂದು ಕಾರಣವಲ್ಲವೇ ?

ಶ್ರೀ ಕೆ. ಎ. ಶಂಕರ ಗೌಡ.— ಆಗಲೇ ಉತ್ತರ ಹೇಳಿದ್ದೇನೆ, ಆಡಿಟ್ ಮಾಡದೇ ಇರುವುದರಿಂದ ಕೊಡುವುದಕ್ಕೆ ಆಗಿಲ್ಲ ಎಂದು.

ಶ್ರೀ ಜಿ. ರಾಮೇಗೌಡ.—ಆಡಿಟ್ ಮಾಡುವುದು ಸರ್ಕಾರದವರ ಕೆಲಸವಾಗಿರುವುದರಿಂದ ಅವರು ಮಾಡದಿದ್ದರೆ ಅದು ಅವರ ತಪ್ಪು. ಆ ಕಾರಣಕ್ಕಾಗಿ ಗ್ರಾಂಟ್ ಕೊಡದಿದ್ದರೆ ಶಾಲೆಗಳಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಕೆ. ಎ. ಶಂಕರ ಗೌಡ.—ಅದಕ್ಕೇ ಅಂತಹ ಸಂದರ್ಭಗಳಲ್ಲಿ ಏನಾಯಿತಿ ಕೊಡಬೇಕೆಂದು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಬರೆದಿದ್ದೇವೆ.

ಶ್ರೀ ಜಿ. ರಾಮೇಗೌಡ.—ಏಡೆಡ್ ಸ್ಕೂಲುಗಳಿಗೆ ಪ್ರತಿವರ್ಷವೂ ಆಡಿಟ್ ಮಾಡಿಸಿ ಮುಂಚಿತವಾಗಿ ಅವರಿಗೆ ಹಣ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ಸಹಾಯ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ನಮ್ಮ ಅಭಿಲಾಷೆಯೂ ಅದೇ ಆಗಿದೆ.

ಶ್ರೀ ಜೆ. ಆರ್. ಹಾಲಸ್ವಾಮಿ.—ತಾಲ್ಲೂಕು ಬೋರ್ಡ್ ಸ್ಕೂಲುಗಳ ಆರ್ಥಿಕ ಪರಿಸ್ಥಿತಿ ಬಹಳ ಕಷ್ಟವಾಗಿರುವುದರಿಂದ ಗ್ರಾಂಟ್ ಇನ್ ಏಡ್ ಕೊಡುವಾಗ ಮೊದಲನೆ ವರ್ಷದಿಂದಲೇ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ಅದು ಸಾಧ್ಯವಿಲ್ಲ.

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಜಿ.—ಈ ಏಡೆಡ್ ಸ್ಕೂಲುಗಳಿಗೆ ಗ್ರಾಂಟ್ ಕೊಡುವಾಗ ಆಯಾಯ ವರ್ಷವೇ ಗ್ರಾಂಟ್ ಕೊಡುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಈ ವರ್ಷದ ಗ್ರಾಂಟನ್ನು ಮುಂದಿನ ವರ್ಷ ಕೊಡುತ್ತೇವೆ

---

## Power Supply for Irrigation Pumpsets

*Q.—101. Smt. WINNIFRED F. FERNANDES (Coondapur).—

Will the Minister for Public Works be pleased to state :—

whether the Government would direct the Mysore State Electricity Board to see that all applications for Electric Power supply for Irrigation Pumpsets pending for more than 6 months are given power supply at once and thus help to improve food production from now on ?

4.—Sri ALUR HANUMANTHAPPA (Deputy Minister for Minor Irrigation) [On behalf of SRI VEERENDRA PATIL (Minister for Public Works)].—The Mysore State Electricity Board are energising Irrigation Pumpsets as quickly as possible in the light of the feasibility report and according to a phased programme. It would not be possible to energise all the Irrigation Pumpsets for which applications have been received within a period of six months, as this is not practicable.

Smt. WINNIFRED F. FERNANDES.—May I know whether the Hon'ble Minister will see that electric power is given to the raiyats who have installed pumpsets already ?

Mr. SPEAKER.—The Hon'ble member may kindly give the names.

Smt. WINNIFRED F. FERNANDES.—I am referring to Coondapur constituency.

† Sri ALUR HANUMANTHAPPA.—If the Hon'ble Member suggests specific villages where pumpsets are not serviced, the Government will definitely consider.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ರೈತರೇ ಸ್ವಂತ ದುಡ್ಡಿನಿಂದ ತಂದ ಪಂಪಸೆಟ್ಟುಗಳು ಇರಲು, ಸರ್ಕಾರದವರೇ ಐ. ಪಿ. ಸೆಟ್ಟುಗಳನ್ನು ಕೊಟ್ಟಮೇಲೆ ವರ್ಷಾನುಗಟ್ಟಲೆ ಅದಕ್ಕೆ ಕರೆಂಟ್ ಕೊಡುವುದಕ್ಕೆ ನಿಧಾನವಾಗುತ್ತದೆ. ಯಾರಿಗೆ ಪಂಪುಸೆಟ್ ಲೋನ್ ಕೊಡುತ್ತಾರೋ ಅಂತಹ ವರಿಗೆ ಲೋನ್ ಕೊಟ್ಟ ತಕ್ಷಣ ಕರೆಂಟ್ ಕೊಟ್ಟು ಸರ್ವಿಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಪಂಪುಸೆಟ್ಟುಗಳನ್ನು ಕಂತ್ರಾಗಳ ರೂಪದಲ್ಲಿ ಕೊಟ್ಟಮೇಲೆ ರೈತರು ಅದರ ಒಗ್ಗೆ ಕೆಲವು ಕೆಲಸಗಳನ್ನು ಮಾಡಬೇಕು, ಪಂಪ್ ಸೆಟ್ ಕಟ್ಟಬೇಕು, ವೈರಿಂಗ್ ಮಾಡಬೇಕು, ಕಂಪ್ಲೀಷನ್ ರಿಪೋರ್ಟ್ ಕಳುಹಿಸಿ ಕೊಡಬೇಕು. ಈ ಎಲ್ಲಾ ಫಾರ್ಮಾಲಿಟೀಸ್ ಮಾಡಬೇಕು. ಪವರ್ ಕೊಡಬಾರದು ಎನ್ನುವ ಸಂಕುಚಿತ ಭಾವನೆ ಇಲ್ಲ. ಇವತ್ತಲ್ಲಿ ನಿನ್ನೆಷ್ಟರಿಂಕೆ ವೆಹಿಸಿ ಎಲ್ಲಿ ಅತಿ ಬೇಗ ಕೆಲಸ ಆಗುತ್ತದೋ ಅಂತಹ ಕಡೆ ಪಂಪುಸೆಟ್ಟುಗಳಿಗೆ ಪವರ್ ಕೊಡುವ ಏರ್ಪಾಡು ಮಾಡಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ —ಈ ಪ್ರಶ್ನೆ ಇಡೀ ರಾಜ್ಯಕ್ಕೆ ಒಳಪಡುತ್ತದೆ.

ಅಧ್ಯಕ್ಷರು.—ಈ ಪ್ರಶ್ನೆ ಕುಂದಾಪುರವ ನವಸ್ಯೆ ಏನಿಯಾಕ್ಕೆ ಸಂಬಂಧಪಟ್ಟದ್ದು.

ಶ್ರೀ ಎಸ್. ಗೋಪಾಲ ಗೌಡ.—ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಅರ್ಜಿ ಹಾಕಿದ 6 ತಿಂಗಳ ಮೇಲ್ಪಟ್ಟ ಅರ್ಜಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎಂದು ಬೋರ್ಡಿನವರಿಗೆ ಆದೇಶ ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಆ ತರಹ ಎಲ್ಲಾ ಅರ್ಜಿಗಳ ಸಂಬಂಧದಲ್ಲೂ ವಿದ್ಯುತ್ತನ್ನು ಒದಗಿಸುವುದು ಪ್ರಾಯೋಗಿಕವಲ್ಲವೆದ್ದರಿಂದ ವಿದ್ಯುತ್ತನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದೀರಿ. ಇದರ ಅರ್ಥ ಏನು ? ಇದು ನನಗೆ ಅರ್ಥವಾಗುವುದಿಲ್ಲ. ತಿಳಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅರ್ಜಿ ಹಾಕಿಕೊಂಡದ್ದು ಮುಖ್ಯವಾದುದಲ್ಲ. ಎಲ್ಲಾ ಅರ್ಜಿ ಹಾಕಿದ ಮೇಲೆ ಅವರ ಭಾಗದ ಕೆಲಸ ಮಾಡಿದರೆ ಮಾತ್ರ ಇಲಾಖೆಯವರು 5 ತಿಂಗಳಲ್ಲಿ 5 ವಾರದಲ್ಲಿ ಸರ್ವಿಸ್ ಕೊಡುವ ಯೋಚನೆ ಮಾಡಬಹುದು.

ಶ್ರೀ ಕೆ. ಹೆಚ್ ಪಾಟೀಲ್.—ಗದಗ್ ತಾಲ್ಲೂಕಿನಲ್ಲಿ ವರ್ಷಾನುಗಟ್ಟಲೆ ಅರ್ಜಿಗಳು ಪೆಂಡಿಂಗ್ ಇವೆ. ಅದಕ್ಕೆ ಲಕ್ಷ್ಯ ಪೂರೈಸಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅಂತಹ ನಿದರ್ಶನಗಳು ನಮ್ಮ ಮುಂದೆ ಇಲ್ಲ, ಮಾನ್ಯ ಸದಸ್ಯರು ತಿಳಿಸಿದರೆ ಅತಿ ವೇಗವಾಗಿ ಆ ಕೆಲಸವನ್ನು ಮಾಡುತ್ತೇವೆ. ಮಾನ್ಯ ಸಭೆಯ ಗಮನಕ್ಕೆ ತರುವುವಾದರೆ ಮೂರನೇ ಯೋಜನೆಯಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್‌ನಿಂದ ಸುಮಾರು 25 ಸಾವಿರದ 469 ಪಂಪು ಸೆಟ್ಟುಗಳಿಗೆ ಸರ್ವಿಸ್ ಮಾಡಿದೆ.

†Indicates that the speeches or remarks have not been revised by the member concerned.

Sri C. K. RAJAIAH SETTY.—May I know the number of pumpsets installed last year in Coondapur Taluk and the number of applications pending for installation this year ?

Sri ALUR HANUMANTHAPPA.—It is more a detail. If the Hon'ble Member puts another question, I will answer.

ಶ್ರೀ ಎಂ. ಎಸ್. ನೀಲಕಂಠಸ್ವಾಮಿ.—ತುಮಕೂರು ಜಿಲ್ಲೆಯಲ್ಲಿ ಕೆಲವು ಭಾಗಕ್ಕೆ ಪವರನ್ನು ಕೊಟ್ಟು ಇನ್ನು ಕೆಲವು ಭಾಗಕ್ಕೆ ದೂರ ಎಂಬ ನೆಪದಿಂದ ಕೊಟ್ಟಿಲ್ಲ. ಅಂಥಾ ಕಡೆಗಳಿಗೆ ಪವರನ್ನು ಸಪ್ಲೈ ಮಾಡುವುದಕ್ಕೆ ಸರ್ಕಾರದವರೇನು ಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ.—ಅಂಥ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

Sri A. R. BADARI NARAYAN.—In view of the topmost priority necessary for the development of agriculture, will the Government consider the question of removing all impediments that are there for supply of power to pumpsets ?

Sri ALUR HANUMANTHAPPA.—Yes, Sir, with a view to give top priority in supplying power to pump sets, Government in the year 1962 August/September have removed one impediment. The Board used to spend Rs. 600 per h.p. Government have thought it better to increasing the ceiling limit fixed up to Rs. 2,500 per h.p.

Sri H. C. LINGA REDDY.—May I know the number of applications that are pending now for power supply and also whether the Government have any targetted figure with regard to pumpsets in the fourth Five Year Plan and if so, how many ?

Sri ALUR HANUMANTHAPPA.—The total number of applications pending, I do not have details with me now. During the Fourth Plan, Government propose to service nearly 75,000 pumpsets.

ಶ್ರೀ ಎಂ. ಎನ್. ರಾವಣ್ಣ.—ಎರೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಕೊಡಬೇಕಾಗಿದ್ದರೆ ಮೊದಲು ಅಲ್ಲಿಗೆ ಪವರ್‌ಲೈನ್ ಮಂಜೂರಾಗಿದ್ದರೆ ಮಾತ್ರ ಪಂಪ್ ಕೊಡುತ್ತಾರೆಂಬುದು ಗೊತ್ತಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಪವರ್ ಲೈನ್ ಎಷ್ಟು ಹತ್ತಿರದಲ್ಲಿದೆ ಎಂಬುದನ್ನು ನೋಡಿ ಪಂಪ್ ಸೆಟ್ಟುಗಳನ್ನು ಕೊಡುತ್ತಾರೆ.

Sri DIGAMBAR RAO BALWANT RAO.—Out of these 75,000 pumpsets that are given in the Fourth Plan, how many will be given to Gulbarga, Bidar and Raichur Districts, Sir ?

Sri ALUR HANUMANTHAPPA.—Depending upon the need and the demand there, wherever electricity facilities are available, pumpsets will be supplied. Where power supply is not available diesel pumps also will be supplied.

ಶ್ರೀ ಜಿ. ತಮ್ಮಣ್ಣ.—ಬಾವಿಗಳನ್ನು ತೆಗೆಸುವ ಕೆಲಸ 2-3 ಇರಾಖೆಗಳಿಂದ ಆಗಬೇಕಾಗಿದೆ. ಅದರಿಂದ ಇಷ್ಟೆಲ್ಲಾ ವಿಳಾಸವಾಗುವುದಕ್ಕೆ ಕಾರಣವಾಗಿದೆ. ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಕಾನೂನು ಪ್ರಕಾರ ಕೇಂದ್ರ ಸರ್ಕಾರದವರು ಸೆಂಟ್ರಲ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರಿಗೆ ಹಣವ ಸಹಾಯವನ್ನು ನೀಡುತ್ತಾರೆ. ಅದೂ ಸಾಲದೆ ಬಂದಾಗ ಅವರು ಡಿಬೆಂಚರ್ ಲೋನುಗಳನ್ನೆತ್ತಿ ಬಾವಿಗಳ ಕೆಲಸ ಮಾಡಿಸುತ್ತಾರೆ. ಆ ಹಣವು ತಾಲ್ಲೂಕ್ ಬೋರ್ಡ್ ಮೂಲಕ ಜನರಿಗೆ ಹಂಚಿಕೆಯಾಗುತ್ತದೆ.

ಶ್ರೀ ಎಂ. ಜಿ. ಬಣಕಾರ್.—ಏರ್ಪಡಾಕಿ, ಪಂಪ್ ಸೆಟ್ಟುಗಳನ್ನು ಕೊಂಡು, ಪಂಪ್ ಹೌಸನ್ನು ಕಟ್ಟಿ ಈ ಎಲ್ಲ ಕೆಲಸಗಳನ್ನೂ ಮುಗಿಸಿದ್ದರೂ ಕರೆಂಟ್ ಸಿಕ್ಕದಿರತಕ್ಕ ಜನರು ಅನವೇರಿಯಲ್ಲಿ ನೂರಾರು ಜನವಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೆ ಅಲ್ಲಿ ಈ ಕೆಲಸ ಒಂದು ವರ್ಷದಿಂದಲೂ ತಡ ಆಗಿರುವುದರಿಂದ ಈ ಕೆಲಸವನ್ನು ಅರು ವಾರದೊಳಗಾಗಿ ಮಾಡಿ ಕೊಡುವಾಗುತ್ತದೆಯೇ?

ಶ್ರೀ ಅಲೂರು ಹನುಮಂತಪ್ಪ.—ಆ ಪಂಪ್ ಸೆಟ್ಟುಗಳನ್ನು ಪಡೆಯತಕ್ಕ ಎಲ್ಲಾ ನಿಯಮಗಳನ್ನೂ ಪೂರೈಸಿದ್ದರೆ, ಅವುಗಳನ್ನು ಪರಿಶೀಲನೆ ಮಾಡಲಾಗುತ್ತದೆ; ಅವಕ್ಕೆ ಪ್ರಯತ್ನ ಪಡುತ್ತೇವೆ.

Sri AZEEZ SAIT.—Is it not a fact that due to shortage of poles, wires, etc., inordinate delay has been caused in giving connection to pumpsets and not for fulfilment of formalities which have already been completed as desired by the Hon'ble Minister?

Sri ALUR HANUMANTHAPPA.—No delay has been caused. The poles have been manufactured in almost every division in the Electricity Board and other materials are also purchased even elsewhere.

ಶ್ರೀ ನದಾಶಿವಪ್ಪ ಪಾಟೀಲ್.—ಇದೇ ರೀತಿ ಮೆಟೀರಿಯಲ್ಸ್ ತಯಾರು ಮಾಡಿದಂತದನ್ನು ಹೇಳಿದಿರಿ. ಎಲ್ಲ ಕೆಲಸ ಮಾಡಲು ಮೂರು ಮೂರು ತಿಂಗಳ ಎಕ್ಸಿಕ್ಯೂಟೀವ್ ಇಂಜಿನಿಯರಿಗೆ ಸ್ಯಾಂಕ್ಷನಿಂಗ್ ಪವರ್ ಇಲ್ಲ, ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಹೋಗಬೇಕೆಂದು ಹೇಳುತ್ತಿದ್ದಾರೆ, ಇದು ಸರಿಯೇ?

ಶ್ರೀ ಅಲೂರು ಹನುಮಂತಪ್ಪ.—ಎಕ್ಸಿಕ್ಯೂಟಿವ್ ಇಂಜಿನಿಯರಿಗೂ ಅಧಿಕಾರವಿದೆ. ಸೂಪರಿಂಟೆಂಡಿಂಗ್ ಇಂಜಿನಿಯರಿಗೂ ಅಧಿಕಾರ ಇದೆ. ಇಪ್ಪು ಒಂದು ಪರಿಮಿತಿಯಲ್ಲವೆ. ಅದಕ್ಕೆ ಒಂದು ಸ್ಟೇಜ್ ಇದೆ.

Sri CHANDRAKANTH GURUPADAPPA.—Is it not a fact that due to the inferior quality of the pumpsets that portions of them are burnt after installation?

Sri ALUR HANUMANTHAPPA.—There are 25 firms which are supplying these pumpsets. Much depends upon the preference shown by the ryots to take the particular pumpset on hire purchase.

ಶ್ರೀ ಎಸ್. ಗೋಪಾಲಗೌಡ.—ತಗ ಮಾನ್ಯ ಸಚಿವರು ತಿಳಿಸಿದರು, ನಲಕಂಬಿಗಳ ಕೊರತೆ ಏನೂ ಇಲ್ಲ. ಅಲ್ಲಿಂದ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಕೊಡುವ ವಿಷಯದಲ್ಲಿ, ಆ ಪ್ರಶ್ನೆ ಬಂದಾಗ, ತಮ್ಮ ಖಾತೆಯ ಮಂತ್ರಿಗಳು ತಿಳಿಸಿದರು, ಈ ವಸ್ತುಗಳ ಅಭಾವದಿಂದ ವಿದ್ಯುಚ್ಛಕ್ತಿ ಇದ್ದರೂ ಕೂಡ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಆದ್ದರಿಂದ ಅವರು ಹೇಳುವುದು ನಿಜವೇ, ಅಥವಾ ಇವರು ಏನಾದರೂ ನೀರಾವರಿ ಕೊಡುವುದಕ್ಕೆ ಪ್ರತ್ಯೇಕವಾಗಿ ಪೋಲ್ಸು ಸಿದ್ಧಮಾಡಿಕೊಂಡಿದ್ದಾರಾ? ಯಾವ ಮಾತು ಸರಿ?

ಶ್ರೀ ಅಲೂರು ಹನುಮಂತಪ್ಪ.—ಪ್ರಯಾರಿಟಿ ಪಂಪ್ ಸೆಟ್ಟುಗಳಿಗೆ ಕೊಟ್ಟು ವ್ಯವಸಾಯಕ್ಕೆ ಸರ್ಕಾರ ಅವಕಾಶ ಕೊಡುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ಸರ್ವಿಸ್ ಕೊಡತಕ್ಕ ಉದ್ದೇಶವೇನೂ ಸರ್ಕಾರಕ್ಕೆ ಇದೆ. ಅದರೆ, ಎಲ್ಲವೂ ಒಂದೇ ಯೋಜನೆಯಲ್ಲಿ ಮಾಡಿ ಮುಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನಾಲ್ಕನೆಯ ಯೋಜನೆಯಲ್ಲಿ ಮೂರು ಸಾವಿರ ಹಳ್ಳಿಗಳಿಗೆ ಪೂರೈಸಬೇಕೆಂದು ಸರ್ಕಾರ ಯೋಜನೆಯನ್ನು ರೂಪಿಸಿಕೊಂಡಿದೆ.

Mr. SPEAKER.—Next question No. 276.

Sri AZEEZ SAIT.—Before the Hon'ble Member goes into the next question, I would like to draw your kind attention to an important point and we want your excuse and help for that. The Hon'ble Minister's and the Hon'ble Deputy Minister's answers are quite different. One states that there is shortage of materials and the other says the

(SRI AZEEZ SAIT)

material is in their hands. If such wrong replies are given, it means privilege. You are the custodian of the privileges of this House. I want that a responsible answer should be given and not wrong replies, for which there should be no excuse.

MR. SPEAKER.—There is nothing like my excuse. I have no excuse and he has no excuse. He has answered. Sixty minutes are about to be over and still there are two questions more.

---

## Providing of Electricity

*Q.—276. Sri G. RAME GOWDA (Doddaballapur).—

Wll the Minister for Public Works be pleased to state :—

(*a*) whether the Government is aware that the Hobli Headquarters, namely, Doddabelavangala and Sasalu are not provided with electricity ;

(*b*) the reasons for the same ;

(*c*) the policy observed in drawing the non-remunerative lines ;

(*d*) whether they would draw a non-remunerative line to Sasalu as this is a very backward area ?

*A.*—Sri ALUR HANUMANTHAPPA (Deputy Minister for Minor Irrigation [On behalf of SRI VEERENDRA PATIL (Minister for Public Works).—

(*a*) Yes.

(*b*) (1) The sanctioned work of electrification of Doddabelavangala Village is not yet taken up as the V.P. authorities have not completed the formalities.

(2) A sub-transmission line from Doddaballapur to Sasalu for supplying power to IP sets in the village is proposed to be constructed and this is under examination. Sasalu is at the tail end of this proposed line. Meanwhile, the Load Survey Forms duly filled in for Sasalu and other villages and countersigned by the Block Development Officer have not yet been received from the Chairman, Village Panchayats.

(*c*) As a general policy, non-remunerative schemes are not taken up.

(*d*) No. Proposals are on hand for drawing a sub-transmission line from Doddabelavangala to Sasalu for supply of power to IP sets in 14 villages entroute and their elecrification. Sasalu also is one of them.

ಶ್ರೀ ಜಿ. ರಾಮೇಗೌಡ.—ಸರ್ಕಾರದ ನೀತಿ, ಹೋಬಳಿ ಹೆಡ್‌ಕ್ವಾರ್ಟರ್ಸ್‌ಗೆ ವಿದ್ಯುಚ್ಛಕ್ತಿ ಒದಗಿಸತಕ್ಕದ್ದು ಇರುವಾಗ ಲಾಭ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ. ಮುಖ್ಯವಾಗಿ ಹೋಬಳಿಗಳಿಗೆ ಸಲಕರಣೆಗಳನ್ನು ಒದಗಿಸುವುದಕ್ಕೆ ಆದ್ಯತೆ ಕೊಡುತ್ತೀರಾ ?